# ಗುರುದೇವ ರವೀಂದ್ರರ ಜೀವನದೃಷ್ಟಿ

ಪ್ರೊ. ಟಿ.ಎಂ. ಪಂಡಿತ್

"ಸೋದರರೇ, ನನಗೀಗ ಬಿಡುವು. ಅಗಲುವ ಮುನ್ನ ನಿಮಗೆಲ್ಲ ನನ್ನ ಅನಂತ ವಂದನೆಗಳು. ಅಪ್ಪಣೆ ಕೊಡಿ. ಇದೊ ನನ್ನ ಮನೆಯ ಬೀಗದ ಕೈಗಳು. ನನ್ನದೇನಿದೆ ಅದರಲ್ಲಿ? ನಾನು ಜೀವನವನ್ನು ಇಷ್ಟೊಂದು ಪ್ರೀತಿಸಿದ್ದೇನೆ. ಸಾವನ್ನೂ ನಾನು ಅಷ್ಟೇ ಪ್ರೀತಿಸದೇ ಇರಬಹುದೇ? " – ಇಂತಹ ಉಕ್ತಿಗಳಿಂದ ಜೀವನದ ಘನವಾದ ಗಂಭೀರ ತತ್ತ್ವಗಳನ್ನು ತಿಳಿಯಾಗಿ ನಿರೂಪಿಸಿದವರು, ಹಾಡಿ ಹಣ್ಣಾದ, ಜಗದ ಕಣ್ಣಾದ ವಿಶ್ವಕವಿ ರವೀಂದ್ರರು. ಅವರು ತಮ್ಮ ಸಾಹಿತ್ಯ ಸಿದ್ಧಿಯಿಂದ ಬಂಗಾಳಿ ಸಾಹಿತ್ಯಕ್ಕೆ ಸಾಗರದ ಆಳವನ್ನೂ ವಿಸ್ತಾರವನ್ನೂ ದೊರಕಿಸಿಕೊಟ್ಟರು. ರಾಷ್ಟ್ರಕವಿಯಾದ ಇವರು ಭಾರತೀಯರ ಹೃದಯ ಮಂದಿರದ ಸಾರ್ವಭೌಮರಾಗಿದ್ದಾರೆ. ಅವರು ತಮ್ಮ ದೈವಪ್ರಜ್ಞೆ ಮತ್ತು ಜೀವನೋತ್ಸಾಹದ ಪ್ರಭಾವಳಿಯನ್ನು ಎಲ್ಲ ರಂಗಗಳಲ್ಲಿ ಹರಿಸಿದ್ದಾರೆ. ಅವರ ಸಮೃದ್ಧ ಸಾಹಿತ್ಯದ ಒಂದೊಂದು ಶಬ್ದದಲ್ಲಿಯೂ, ಕವಿತೆಯ ಒಂದೊಂದು ಸಾಲಿನಲ್ಲಿಯೂ ಸೌಂದರ್ಯದ ಅಮೂಲ್ಯ ಖನಿಜ ಹುದುಗಿದೆ. **ಅವರು ಸತ್ಯ ಮತ್ತು ಸೌಂದರ್ಯಗಳ ಧೀಮಂತ ಹಾಗೂ ಉಜ್ವಲ ಆರಾಧಕರಾಗಿದ್ದರು.**

ನಿಸರ್ಗ ಚೆಲ್ಲಿದ ಸೌಂದರ್ಯರಾಶಿಯನ್ನು ತಮ್ಮ ನಿರುದ್ವಿಗ್ನ ಮನದಿಂದ, ಕಮನೀಯ ಕಣ್ಣುಗಳಿಂದ ಕಂಡ ರವೀಂದ್ರರು, ನೆಲ, ಜಲ, ಝರಿ, ಕೊಳ, ಕಾರಂಜಿ, ನದಿ, ಬೆಟ್ಟ, ಕಾಡು, ಸುಳಿವ ಗಾಳಿ, ಪಶು, ಪಕ್ಷಿ, ಹೂವು, ಹಣ್ಣು – ಹೀಗೆ ಪ್ರಪಂಚದ ಅನೇಕಾನೇಕ ಸಂಗತಿಗಳನ್ನು ಬಹುವಾಗಿ ಪ್ರೀತಿಸಿದರು. ಪ್ರೀತಿಸುವ ಶಕ್ತಿ ಇದ್ದವರಿಗೆ ಜೀವನವು ಜೇನಿನಂತೆ ಮಧುರವಾಗಿ ಇರುವುದು ಎಂಬ ಭಾವನೆ ಅವರದು. ಅಂತಹ ಭಾವನೆ ಉಳ್ಳವರಿಗೆ ಪ್ರೀತಿಸಲು ಯೋಗ್ಯವಾದ ಲಕ್ಷೋಪಲಕ್ಷ ದೃಶ್ಯಗಳು ಈ ಭುವನದಲ್ಲಿ ತಾವಾಗಿಯೇ ಮೈ ತೆರೆದು ನಿಂತಿವೆ ಎಂದು ರವೀಂದ್ರರ ಸಿದ್ಧಾಂತ. ಅವರ ದೃಷ್ಟಿಯಲ್ಲಿ ನಿಸರ್ಗ ಎನ್ನುವುದು ದೇವರ ದೇಣಿಗೆ. ದೇವರು ಅಪಾರ ಕರುಣೆ ಹಾಗೂ ಅನುಕಂಪೆ ಹೊಂದಿದವನು. ಬೆವರಿಳಿಸಿ ಪ್ರಾಂಜಲ ಮನಸ್ಸಿನಿಂದ ದುಡಿಯುವವರಲ್ಲಿ, ದೀನ–ದಲಿತರ ಗುಡಿಸಲಿನಲ್ಲಿ ಅವನ ಅನವರತ ವಾಸ. ಸರ್ವಾಂತರ್ಯಾಮಿಯಾದ ಅವನ ವಿಶ್ವ ಸುಂದರ, ಅತಿ ಸುಂದರ. ಜೀವನದ ಸುಖದುಃಖಗಳು, ಕಟುಮಧುರ ಅನುಭವಗಳು, ಚಿಕ್ಕ ಮಕ್ಕಳ ಚಕ್ಕಂದದ ಆಟ, ದೇಶಾಭಿಮಾನದ ಅನುರಣನ, ಮರಣದ ಪ್ರಶಾಂತಿ – ಇವೆಲ್ಲವೂ ರವೀಂದ್ರರಿಗೆ ಅವೆಲ್ಲದರ ಹಿನ್ನೆಲೆಯಲ್ಲಿರುವ ಭಗವತ್ತತ್ತ್ವದ ಸ್ಮರಣೆಯನ್ನೇ ಪ್ರಚೋದಿಸಿದವು. "ಜಗತ್ತಿನಲ್ಲಿ ಹುಟ್ಟುವ ಪ್ರತಿಯೊಂದು ಶಿಶುವೂ, ದೇವರು ಮಾನವನ ಬಗ್ಗೆ ಇನ್ನೂ ನಿರಾಶನಾಗಿಲ್ಲ ಎಂಬ ಸಂದೇಶವನ್ನು ಹೊತ್ತು ತರುತ್ತದೆ" ಎಂಬ ರವೀಂದ್ರರ ಮಾತು ಎಷ್ಟು ಆಶಾದಾಯಕ!

ರವೀಂದ್ರರು 'ಬಿದಿಗೆ ಚಂದ್ರ' ಎಂಬ ತಮ್ಮ ಕವನದಲ್ಲಿ ಒಂದು ಮಗು ತನ್ನ ತಾಯಿಗೆ ಹೇಳುವ ಮಾತುಗಳನ್ನು ಹೀಗೆ ಬರೆಯುತ್ತಾರೆ: "ಹಡಗನ್ನು ಮಾಡಲಿಕ್ಕೆ ಒಂದು ತುಂಡು ಕಾಗದವನ್ನು ತೆಗೆದು ಕೊಂಡರೆ, ನೀನೇಕೆ ಅಷ್ಟೊಂದು ಸಿಟ್ಟಿಗೇಳುವೆ? ಅಪ್ಪ ಯಾವಾಗಲೂ ಬರೆದೂ ಬರೆದೂ ಎಷ್ಟೊಂದು ಕಾಗದ ಹಾಳು ಮಾಡುತ್ತಾರಲ್ಲಾ. ಅವರಿಗೆ ನೀನು ಎಂದಾದರೂ ಬೇಡವೆಂದು ಹೇಳಿದೆಯಾ? ಅವರು ನೀನು ನನಗೆ ಹೇಳುವ ಕಥೆಗಳನ್ನು ಏಕೆ ಬರೆಯುವುದಿಲ್ಲ?" ಮಗುವಿನ ಮುಗ್ಧ ಪ್ರಶ್ನೆಯ, ಸೊಗಸಾದ ಅಷ್ಟೇ ಗಂಭೀರವಾದ ಇಂಥ ಚಿತ್ರ ನಮಗೆ ಬೇರೆ ಎಲ್ಲಿ ತಾನೆ ದೊರಕೀತು! ಮುದ್ದು ಮಕ್ಕಳ ಕಲ್ಪನಾ ಸಾಮ್ರಾಜ್ಯ ಎಷ್ಟು ಭವ್ಯವಾದದ್ದು, ಅವರ ಮನಸ್ಸು ಎಷ್ಟು ಮೃದು, ಎಷ್ಟು ಸರಳ ಅವರು ಕೇಳುವ ಪ್ರಶ್ನೆಗಳು! **"ನಿನ್ಹಾಂಗ ಆಡಾಕ, ನಿನ್ಹಾಂಗ ಹಾಡಾಕ ಪಡೆದು ಬಂದಿರಬೇಕೋ ಗುರುದೇವ "**– ರವೀಂದ್ರರ ಬಗ್ಗೆ ವರಕವಿ ಬೇಂದ್ರೆಯವರು ಆಡಿದ ಈ ನುಡಿ ಸತ್ಯಸ್ಯ ಸತ್ಯ.

ರವೀಂದ್ರರ ದೃಷ್ಟಿಯಲ್ಲಿ ದೇವರ ಈ ಸೃಷ್ಟಿಯಲ್ಲಿ ಪ್ರೀತಿ, ಸತ್ಯ, ನ್ಯಾಯ – ಇವೇ ಚಿರಂಜೀವಿಗಳು, ಸುಖದಾಯಿನಿಗಳು. ಸತ್ಯವು ಸೋಲನ್ನು ಸಹಿಸಬಲ್ಲುದು, ಆದರೆ ಸುಳ್ಳಿಗೆ ಆ ಸಾಮರ್ಥ್ಯವಿಲ್ಲ ಎಂಬುದು ರವೀಂದ್ರರ ದೃಢವಾದ ನಿಲುವು. ಅಸತ್ಯ, ಅನ್ಯಾಯ, ವಂಚನೆಗಳಿಗೆ ಧೃತಿಗೆಡದ ಸ್ಥೈರ್ಯ ಅವರದಾಗಿತ್ತು. ಅಂಥ ಸಂದರ್ಭ ಗಳಲ್ಲಿ ಹೊರಹೊಮ್ಮಿದ ಅವರ ಅನೇಕ ವಿಚಾರ ಮಂಜರಿಗಳು 'Stray Birds'( ಒಂಟಿಯಾಗಿ ಹಾರಿಬಂದ ಹಕ್ಕಿಗಳು) ಎಂಬ ಅವರ ಕವನಸಂಕಲನದಲ್ಲಿ ಕಂಡು ಬರುತ್ತವೆ. **'ಮನುಷ್ಯರು ಕ್ರೂರರಾಗಿದ್ದರೂ ಮಾನವ ದಯಾಮಯಿ'** – ಎಂಬ ಅವರ ಮಾತು ಸಾಮಾನ್ಯ ಮನುಷ್ಯರೂ ಉದಾತ್ತ ಮಾನವರಾಗುವ ಬಗ್ಗೆ ಅವರಿಗಿದ್ದ ಅಚಲವಾದ ವಿಶ್ವಾಸವನ್ನೂ ಕಳಕಳಿಯನ್ನೂ ಪ್ರತಿಬಿಂಬಿಸುತ್ತದೆ. ಜೀವನೋತ್ಸಾಹ ಮತ್ತು ಸಾಹಸ ಪ್ರವೃತ್ತಿಗಳನ್ನು ಪ್ರಚೋದಿಸಿ, ಸನ್ಮಾರ್ಗದಿಂದ ಬಾಳಲು, ಬಾಳಿನ ಹಂದರವನ್ನು ಚಂದಗೊಳಿಸಲು ಪ್ರೇರೇಪಿಸುವ ರವೀಂದ್ರರ ಕೃತಿಗಳು ಓದುಗರ ಹೃದಯಕ್ಕೆ ಸಂತಸವನ್ನೂ ಮನಸ್ಸಿಗೆ ನೆಮ್ಮದಿ ಯನ್ನೂ, ಆತ್ಮಕ್ಕೆ ಪರಮಾತ್ಮನ ದಿವ್ಯಸಾನ್ನಿಧ್ಯದ ಅನುಭಾವವನ್ನೂ ಒದಗಿಸುತ್ತವೆ. "ಜೀವನವು ಮಧುರವಾಗಿದೆ. ನನಗೆ ಸಾಯುವ ಆತುರವಿಲ್ಲ." ಎಂದು ಅವರೇ ಒಂದೆಡೆ ಹೇಳುತ್ತಾರೆ.

ರವೀಂದ್ರರಿಗೆ ಸಾವೂ ಕೂಡ ಸುಂದರವಾಗಿ ಕಾಣುತ್ತದೆ. ಜೀವನಕ್ಕೆ ಅಂಟಿಕೊಂಡಿರುವ ಸಾವಿನ ಮಹತ್ವವನ್ನರಿತ ಅವರು, ಒಂದೆಡೆ ಹೀಗೆ ಹೇಳಿದ್ದಾರೆ: " ಸಾವು ಎಂಬ ಕಾರಂಜಿಯಿಂದಲೇ ಜೀವನವೆಂಬ ಜಲಾಶಯದಲ್ಲಿ ಆಸಕ್ತಿಯ, ಉಲ್ಲಾಸದ ಅಲೆಗಳು ಹೊರಹೊಮ್ಮುತ್ತವೆ." ಅವರ ಗೀತೆಗಳನ್ನು ಓದಿದ ಯೇಟ್ಸ್ ಕವಿ ಮಂತ್ರಮುಗ್ಧರಾಗಿ, " ಈ ಗೀತೆಗಳು ನನ್ನ ಜೀವನದುದ್ದಕ್ಕೂ ಕಾಣಬಯಸಿ, ಕನಸು ಕಾಣುತ್ತಿದ್ದ ಪ್ರಪಂಚವನ್ನೇ ಒಡಮೂಡಿಸುತ್ತವೆ. ರವೀಂದ್ರರ ಕಾವ್ಯದ ಒಂದು ಸಾಲನ್ನು ಓದುವುದೆಂದರೆ, ಜಗತ್ತಿನ ಕಷ್ಟಕೋಟಲೆಗಳನ್ನೆಲ್ಲ ಮರೆತಂತೆ" ಎಂದು ಉದ್ಗರಿಸಿದರು.

ಸುನೀಲ ಗಂಗೋಪಾಧ್ಯಾಯ ಎಂಬ ಪ್ರಸಿದ್ಧ ಬಂಗಾಳಿ ಕವಿ ರವೀಂದ್ರರ ಪ್ರಸ್ತುತತೆಯನ್ನು ಕುರಿತು ಹೀಗೆ ಬರೆಯುತ್ತಾರೆ: **" ಏಕಾಂತದಲ್ಲಿ ರವೀಂದ್ರರ ಗೀತೆಗಳನ್ನು ಓದುತ್ತಿರುವಾಗ ಇದ್ದಕ್ಕಿದ್ದಂತೆ ನನ್ನ ಕಣ್ಣುಗಳಲ್ಲಿ ನೀರು ತುಂಬುತ್ತದೆ. ಇದನ್ನು ಹೇಳಿಕೊಳ್ಳಲು ನನಗೆ ಸಂಕೋಚವೆನಿಸುವುದಿಲ್ಲ. ಈ ಕಣ್ಣೀರು ಹೃದಯದಲ್ಲಿ ಸಂತೋಷವನ್ನು ಉಕ್ಕಿಸುತ್ತದೆ. ಇಂದಿಗೂ ಇಂಥ ಸಂತೋಷ ನೀಡುವ ರವೀಂದ್ರರಿಗೆ ನಾನು ಕೃತಜ್ಞನಾಗಿದ್ದೇನೆ."**